# ‘ಅವಳ ಪಥ’ ಒಂದು ನೋಟ

**ಸಂದೇಶ್ ಎ. ಎಸ್.**
ಕನ್ನಡ ಉಪನ್ಯಾಸಕರು
ಅರಸೀಕೆರೆ
ಹಾಸನ ಜಿಲ್ಲೆ.

Article Link: https://aksharasurya.com/2024/04/sandesh-a-s.php

DOI: https://doi.org/10.5281/zenodo.10938082

## ABSTRACT:

ಜನಪದ ಸಾಹಿತ್ಯದಿಂದ ಇಂದಿನವರೆಗಿನ ಮಹಿಳಾ ಪಯಣವನ್ನು ಈ ಲೇಖನ ದಾಖಲಿಸುತ್ತದೆ. ಮಾತೃಪ್ರಧಾನ ಸಂಸ್ಕೃತಿಯಿಂದ, ಪಿತೃಪ್ರಧಾನ ಸಂಸ್ಕೃತಿಯವರೆಗಿನ ಚಲನೆಯನ್ನು ಸಾಮಾಜಿಕ, ಆರ್ಥಿಕ, ಕೌಟುಂಬಿಕ, ಧಾರ್ಮಿಕ ನೆಲೆಯ ಹಿನ್ನೆಲೆಯಲ್ಲಿ ಶೋಧಿಸಿದೆ. ಪ್ರಸ್ತುತ ಕೃತಿಯು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀ ಪರ ಆಲೋಚನಾ ಕ್ರಮಗಳ ವಿಕಾಸವನ್ನು ಗುರುತಿಸುತ್ತದೆ. ಜನಪದ ಸಾಹಿತ್ಯ ಹಾಗೂ ಹಳಗನ್ನಡ ಕಾವ್ಯಗಳಿಂದ ಹಿಡಿದು ಮಹಿಳೆಯರ ಪ್ರಸ್ತುತ ಸಾಹಿತ್ಯಾಭಿವ್ಯಕ್ತಿಯನ್ನು ರೂಪಿಸುತ್ತಿರುವ ಬೌದ್ಧಿಕ ದ್ರವ್ಯ ಯಾವುದೆಂಬುದು ಇಲ್ಲಿ ಶೋಧಿತವಾಗಿದೆ. ವಚನಕಾರ್ತಿಯರ ದೇಸಿ ಮಾದರಿಯಿಂದ ತೊಡಗಿ, ಈ ಕಾಲದ ಪ್ರಮುಖ ತಾತ್ವಿಕತೆಯಾದ ಸ್ತ್ರೀವಾದಿ ಸಿದ್ಧಾಂತಗಳವರೆಗೆ ಇಲ್ಲಿನ ಚರ್ಚೆಯ ಹರಹಿದೆ. ನವೋದಯ ಸಾಹಿತ್ಯದ ಸಾಮಾಜಿಕ ಅರಿವು, ಪ್ರಗತಿಶೀಲ ಸಾಹಿತ್ಯದ ವೈಚಾರಿಕ ನಿಲುವು, ನವ್ಯದ ಅಂತರಂಗ ಜಗತ್ತಿನ ಒಳಮುಖಿ ಚಲನೆ, ದಲಿತ–ಬಂಡಾಯ ಕಾಲದಲ್ಲಾದ ರಾಜಕೀಯ ಪ್ರಜ್ಞೆಯ ವಿಕಾಸ, ಪ್ರತಿರೋಧ ಹಾಗೂ ಹಕ್ಕು ಪ್ರತಿಪಾದನೆಗಳ ಹೊಸ ಚಲನೆ, ಸ್ತ್ರೀ ಸಂವೇದನೆಯ ಸೂಕ್ಷ್ಮ ಸ್ತರಗಳ ಅರಿವುಗಳನ್ನು ಇಲ್ಲಿ ಗುರುತಿಸಲಾಗಿದ್ದು, ಮಹಿಳಾ ಕಥಾ ಸಾಹಿತ್ಯದ ಚಲನಶೀಲತೆಯನ್ನು ಸಮಗ್ರವಾಗಿ ಹಿಡಿದಿಡಲಾಗಿದೆ. ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಹೆಣ್ಣು ನಡೆಸುವ ಹೋರಾಟ, ತನ್ನತನದ ಹುಡುಕಾಟ ಈ ಲೇಖನ ಒಂದೇ ಸೂತ್ರದಲ್ಲಿ ಹಿಡಿದಿಡುತ್ತದೆ.

## KEYWORDS:

ಅಸ್ಮಿತೆ, ಅಧಿಕಾರಶಾಹಿ, ಸ್ತ್ರೀ ಸಂವೇದನೆ, ಚಿತ್ರಿತ ನೆಲೆ, ಸೃಷ್ಟಿತ ನೆಲೆ, ಸ್ವಾಯತ್ತತೆ.

ಡಾ. ಚೇತನಾ ಹೆಗಡೆ ಅವರು ಬೇರೆ ಬೇರೆ ಸಂದರ್ಭದಲ್ಲಿ ನಾಡಿನ ಬೇರೆ ಬೇರೆ ಸಾಹಿತ್ಯ ಪತ್ರಿಕೆಗಳಿಗೆ ಬರೆದ, ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಮಂಡಿತ ಲೇಖನಗಳ ಗುಚ್ಛವೇ ಅವರ ಚೊಚ್ಚಲ ಕೃತಿ 'ಅವಳ ಪಥ'. ಅವ್ಯಕ್ತ ಪ್ರಕಾಶನವು ಪ್ರಕಟಿಸಿರುವ ಈ ಕೃತಿಯ ಮುನ್ನುಡಿಯಲ್ಲಿ ಲೇಖಕಿಯಾದ ಗೀತಾ ವಸಂತ ಅವರು ಗುರುತಿಸಿರುವಂತೆ 'ಪಿತೃಪ್ರಧಾನ ಚಿಂತನಾ ಆಕೃತಿಗಳ ನಡುವೆ ಅದೃಶ್ಯಳಾಗಿರುವ ಮತ್ತು ಧರ್ಮ, ಸಮಾಜ, ಸಂಸ್ಕೃತಿ, ರಾಜಕೀಯ, ಆರ್ಥಿಕ ಸಂರಚನೆಗಳ ಆಚೆಗೆ ವಿಶಾಲವಾಗಿ ಹರಡಿಕೊಂಡಿರುವ 'ಅವಳ' (ಸ್ತ್ರೀಯ) ಅಂತಃಸತ್ವದ ಸೆಲೆಗಳನ್ನು ಹುಡುಕುವ ಕೆಲಸವೊಂದನ್ನು' ಲೇಖಕಿಯು ಕೃತಿಯಲ್ಲಿ ಮಾಡಿದ್ದಾರೆ.

ಕೃತಿಯಲ್ಲಿ ಚೇತನಾ ಹೆಗಡೆ ಅವರು ಬೇರೆ ಬೇರೆ ಕಾಲಘಟ್ಟದಲ್ಲಿ ಮುಖಾಮುಖಿಯಾದ ಸ್ತ್ರೀ ಅಸ್ಮಿತೆಯ ಪ್ರಶ್ನೆಗಳಿಗೆ ಸಂಸ್ಕೃತಿ ಅಧ್ಯಯನ, ಮಾನವಶಾಸ್ತ್ರ, ಸಮಾಜಶಾಸ್ತ್ರೀಯ ಹಿನ್ನಲೆಗಳಿಂದ ಉತ್ತರಿಸುತ್ತ ಹೋಗಿದ್ದು, ಆ ಮೂಲಕ ಇಡೀ ಕನ್ನಡ ಸಾಹಿತ್ಯವನ್ನು ಹೆಣ್ಣಿನ ಹೆಜ್ಜೆಗಳ ಮೂಲಕ ನಡೆಯುತ್ತ ಕಾಣುವ ಹಾಗೂ ಕಾಣಿಸುವ ಕೆಲವು ಹೊಸನೋಟಗಳನ್ನು ಕೃತಿಯಲ್ಲಿ ನೀಡಿದ್ದಾರೆ. ಕೃತಿಯಲ್ಲಿ ಒಟ್ಟೂ ಹದಿನೈದು ವಿಮರ್ಶಾ ಲೇಖನಗಳಿದ್ದು, ಅವುಗಳನ್ನು ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳ ಕ್ರಮಾನುಗತದಲ್ಲಿ ಇರಿಸಿದ್ದಾರೆ. ಈ ಲೇಖನಗಳನ್ನು ಸ್ಥೂಲವಾಗಿ ಮಾತೃ ಆರಾಧನೆಯ ನೆಲೆ, ಮೌಖಿಕ ಸಾಹಿತ್ಯದ ನೆಲೆ, ಹಳಗನ್ನಡ ಹಾಗೂ ನಡುಗನ್ನಡ ಕಾಲಘಟ್ಟದ ನೆಲೆ ಹಾಗೂ ಹೊಸಗನ್ನಡ ಕಾಲಘಟ್ಟದ ನೆಲೆ ಎಂದು ನಾಲ್ಕು ನೆಲೆಗಳಾಗಿ ವಿಂಗಡಿಸಿ ನೋಡಬಹುದಾಗಿದೆ.

ಕೃತಿಯ ಆರಂಭದ ಲೇಖನದಲ್ಲಿ ಚೇತನಾ ಅವರು ಮಾನವನ ವಿಕಾಸಕ್ರಮದಲ್ಲಿಯ ಮಾತೃ ಮತ್ತು ಪಿತೃಸಂಸ್ಕೃತಿಯ ನೆಲೆಗಳನ್ನು ಹುಡುಕುತ್ತ ಸಾಗಿ, ಪುರುಷ ಹೇಗೆ ತನ್ನನ್ನು ತಾನು ಪ್ರಧಾನ ಎಂದು ಘೋಷಿಸಿಕೊಂಡು ಸ್ತ್ರೀಯನ್ನು ಅಧೀನ ಮಾಡಿಕೊಂಡ ಮತ್ತು ಆಕೆಯನ್ನು ಸಾಮಾಜಿಕ, ಕೌಟುಂಬಿಕ, ಧಾರ್ಮಿಕ, ಆರ್ಥಿಕ ಎಲ್ಲಾ ನೆಲೆಗಳಿಂದ ದೂರ ಇಟ್ಟ ಎಂಬುದನ್ನು ತಿಳಿಸುವ ಕೆಲಸ ಮಾಡಿದ್ದಾರೆ. ಆದಿಮ ಕಾಲದಲ್ಲಿ ಸ್ತ್ರೀ ತನ್ನ ಸಂತಾನೋತ್ಪಾದನೆಯ ಕ್ರಿಯೆಯಿಂದ ಪುರುಷನಲ್ಲಿ ಅಚ್ಚರಿಯನ್ನುಂಟು ಮಾಡಿ ದೈವತ್ವದ ಪಟ್ಟಕ್ಕೆ ಏರಿ ಮಾತೃಪ್ರಧಾನ ಸಂಸ್ಕೃತಿಯ ಅಸ್ತಿತ್ವಕ್ಕೆ ನಾಂದಿ ಹಾಡಿದಳು. ಮುಂದೆ ಅಲೆಮಾರಿ ಬದುಕಿನಿಂದ ಒಂದೆಡೆ ನೆಲೆ ನಿಂತು ಸ್ಥಿರ ಬದುಕನ್ನು ಆರಂಭಿಸಲು ಶುರು ಮಾಡಿದ ಸಂದರ್ಭದಲ್ಲಿ ಸ್ತ್ರೀ ಕೆಲವು ಸಂದರ್ಭಗಳಲ್ಲಿ ಜೈವಿಕ ಹಾಗೂ ಸಾಮಾಜಿಕ ಕಾರಣಗಳಿಂದ ಸಹಾಯ ಪಡೆಯುವ ಸ್ಥಿತಿಗೆ ತಲುಪಿದಾಗ ಪುರುಷ ಆಸ್ತಿಯ ಸಂರಕ್ಷಣೆಯ ನೆಪದಲ್ಲಿ 'ಉತ್ಪಾದನೆ ಮತ್ತು ಸಂತಾನದ' ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿ, ಆಕೆಯನ್ನು ಸಾಮಾಜಿಕ

ನೆಲೆಯಿಂದ ದೂರವಿಟ್ಟ. ಖಾಸಗಿ ಆಸ್ತಿಯ ಪರಿಕಲ್ಪನೆ ಆರಂಭವಾದಾಗ ಪುರುಷ 'ಉತ್ತರಾಧಿಕಾರತ್ವದ ಹಕ್ಕಿನ' ಸಮಸ್ಯೆಗೆ ಪರಿಹಾರವಾಗಿ ಜೈವಿಕ ಪಿತೃತ್ವ ಸ್ಥಾಪಿಸಿದ. ಆಕೆಯ ಮೇಲೆ ಪಾತಿವ್ರತ್ಯದ ಕಲ್ಪನೆ, ಏಕಪತಿನಿಷ್ಠೆ, ಶೀಲದ ಪರಿಕಲ್ಪನೆಗಳನ್ನು ಆರೋಪಿಸಿ, ಕೌಟುಂಬಿಕ ನೆಲೆಯೊಳಗೆ ಆಕೆಯನ್ನು ನಿಯಂತ್ರಿಸಲು ಆರಂಭಿಸಿದ. ಆದಿಮ ಕಾಲದಲ್ಲಿ ಪೌರೋಹಿತ್ಯ ಸ್ಥಾನವನ್ನು ಹೊಂದಿದ್ದ ಆಕೆಯ ಮೇಲೆ ಪುರುಷ ಮಡಿಮೈಲಿಗೆ ಪರಿಕಲ್ಪನೆಯನ್ನು ಹೇರಿ ಸಂಪೂರ್ಣವಾಗಿ ಧಾರ್ಮಿಕ ಅಧಿಕಾರದಿಂದ ದೂರವಿಟ್ಟು, ಧಾರ್ಮಿಕ ನೆಲೆಯನ್ನೂ ತನ್ನ ನಿಯಂತ್ರಣದಲ್ಲಿರಿಸಿಕೊಂಡ. ಶ್ರಮ ವಿಭಜನೆಯಲ್ಲಿ ಗೃಹಕೃತ್ಯ ಕ್ಷುದ್ರ, ಕೀಳು ಎಂದು ಅಲ್ಲಗಳೆದ ಪುರುಷ ಮನೆ ಹೊರಗಿನ ದುಡಿಮೆಯೇ ಶ್ರೇಷ್ಠವೆಂಬ ಶ್ರೇಣಿಕೃತ ಸಮಾಜವನ್ನು ಆರಂಭಿಸಿ, ಆರ್ಥಿಕ ನೆಲೆಯಿಂದಲೂ ಸ್ತ್ರೀಯನ್ನು ಹೊರಗಿಡುವಲ್ಲಿ ಯಶಸ್ವಿಯಾಗಿ ಆಕೆಯನ್ನು ತನ್ನ ಕಕ್ಷೆಗೆ ತಂದು ಪಿತೃಪ್ರಧಾನ ವ್ಯವಸ್ಥೆಯನ್ನು ಗಟ್ಟಿಯಾಗಿ ಸ್ಥಿರಗೊಳಿಸಿದನು. ಈ ಮೂಲಕ ಅದೃಶ್ಯಗೊಂಡಿರುವ ಸ್ತ್ರೀಯ ಅಸ್ಮಿತೆಯ ರೂಪಗಳನ್ನು ಗುರುತಿಸಿ, ಹೆಣ್ಣಿನ ಬದುಕಿನ ಸ್ಥಿತ್ಯಂತರಗಳ ಹಿನ್ನಲೆಯನ್ನು ಶೋಧಿಸುವ ಕೆಲಸವನ್ನು ಲೇಖಕಿಯು ಮಾಡಿದ್ದಾರೆ.

ದೇಸಿ ಮೂಲದ ಕಂಠಸ್ಥ ಮಾಧ್ಯಮದಲ್ಲಿ ಸ್ತ್ರೀ ದಾಖಲಾತಿ, ಚಿತ್ರಿತವಾಗದ ಸ್ತ್ರೀ ಬದುಕಿನ ವಿಶಿಷ್ಟತೆ, ಅವಳ ಮನೋಪ್ರಪಂಚದ ವ್ಯಾಪಾರಗಳು ನಿರ್ವಚನಗೊಂಡಿರುವ ಕುರುಹುಗಳನ್ನು ಹುಡುಕುವ ಕೆಲಸ ಮಾಡಿರುವ ಲೇಖಕಿ ಜನಪದ ಸಾಹಿತ್ಯ ಲೋಕದಲ್ಲಿ ಮೂಡಿಬರುವ ಆಕೆಯ ಪ್ರಪಂಚವನ್ನು 'ಸ್ತ್ರೀ ಚಿತ್ರಿತ ನೆಲೆ' ಮತ್ತು 'ಸ್ತ್ರೀ ಸೃಷ್ಟಿತ ನೆಲೆ' ಎಂದು ವಿಂಗಡಿಸಿದ್ದಾರೆ. ಸ್ತ್ರೀ ಚಿತ್ರಿತ ನೆಲೆಯಲ್ಲಿ ಸ್ತ್ರೀ ಪ್ರತಿಮೆಗಳು ವ್ಯವಸ್ಥೆಯ ಒಪ್ಪಿತ ಮೌಲ್ಯಗಳಿಗೆ ಅಧೀನವಾಗಿ ಚಿತ್ರಿತವಾಗಿ, ಅವಳ ಸಂವೇದನೆಗಳೆಲ್ಲ ಪುರುಷ ಪ್ರಪಂಚಕ್ಕೆ ಸೀಮಿತಗೊಳಿಸಿರುವುದನ್ನು ಹೇಳಲಾಗಿದೆ. ಪುರುಷಪ್ರಧಾನ ವ್ಯವಸ್ಥೆಯ ಪ್ರತಿಷ್ಠೆಗೆ ಬಲಿಯಾದ ಸ್ತ್ರೀ ಬದುಕನ್ನು ಬಲಿಯೆಂದು ಗುರುತಿಸದೆ 'ತ್ಯಾಗ'ವೆಂದು ಮೌಲ್ಯೀಕರಿಸಿರುವುದನ್ನು ಕೆರೆಗೆ ಹಾರವಾದ ಭಾಗೀರಥಿ, ಕೋಟೆಗೆ ಬಲಿಯಾದ ಧರಣಿಯಮ್ಮ, ಮಲ್ಲಮ್ಮ, ಜಕ್ಕವ್ವ ಮುಂತಾದ ಉದಾಹರಣೆಗಳ ಮೂಲಕ ಗುರುತಿಸಿದ್ದಾರೆ. ಬಲಿಯಾದ ಸ್ತ್ರೀಯನ್ನು ದೈವತ್ವಕ್ಕೆ ಏರಿಸಿ, ಅದನ್ನು ಜನರ ಒಳಿತಿಗೆ ಎಂಬಂತೆ ಚಿತ್ರಿಸಿ ರೂಢಿಗತ ವ್ಯವಸ್ಥೆಯೊಳಗೆ ಆಕೆಯ ಬದುಕುವ ಹಕ್ಕನ್ನು ಕಸಿದುಕೊಂಡಿರುವುದನ್ನು ಅರ್ಥೈಸಿದ್ದಾರೆ. 'ಸ್ತ್ರೀ ಸೃಷ್ಟಿತ ನೆಲೆ'ಯಲ್ಲಿ ಸ್ತ್ರೀ ತ್ಯಾಗ, ಬಲಿದಾನ, ಸಹಿಷ್ಣುತೆಯ ಉತ್ಸವ ಮೂರ್ತಿಯಂತೆ ಅಧೀನತೆಯಲ್ಲಿ ಬದುಕಿದ್ದರೂ ಅಲ್ಲಲ್ಲಿ ತನ್ನ ನೈಜ ಸಂವೇದನೆಗೆ ಅಭಿವ್ಯಕ್ತಿಯಾಗಿರುವ ಪರಿಯನ್ನು ಮಾದೇಶ್ವರ ಕಾವ್ಯದ 'ಸಂಕಮ್ಮ', ಜುಂಜಪ್ಪ ಕಾವ್ಯದ 'ಚೆನ್ನಮ್ಮ', ತುಳು

ಜಗತ್ತಿನ 'ಸಿರಿ'ಯಂತಹ ಪಾತ್ರಗಳ ಮೂಲಕ ಗುರುತಿಸುವ ಕೆಲಸ ನಡೆದಿದೆ. ಪ್ರಭುತ್ವವನ್ನು ಪ್ರಶ್ನಿಸುವ, ಪ್ರತಿಭಟಿಸುವ, ನಿರ್ಬಂಧಗಳನ್ನು ಮೀರುವ, ಚೌಕಟ್ಟಿನ ಎಲ್ಲೆಯನ್ನು ದಾಟುವ ಪ್ರಯತ್ನವನ್ನು ಮಾಡಿರುವ ಪಾತ್ರಗಳನ್ನು ಜನಪದ ಕಾವ್ಯ ಮತ್ತು ಕಥೆಗಳಲ್ಲಿ ಹುಡುಕುವ ಕೆಲಸ ಮಾಡಿರುವ ಚೇತನಾ ಅವರು ಜೈವಿಕತೆ ಮತ್ತು ಸಾಂಸ್ಕೃತಿಕತೆಯಿಂದ ಪುರುಷನಿಗಿಂತ ವಿಭಿನ್ನವಾಗುವ ಸ್ತ್ರೀ ಲೋಕದ ಸಂವೇದನೆಗಳ ಅಭಿವ್ಯಕ್ತಿ ಮಾದರಿಗಳನ್ನು ಕಟ್ಟಿಕೊಟ್ಟಿದ್ದಾರೆ.

ಹಳಗನ್ನಡ ಸಾಹಿತ್ಯವನ್ನು ಚೇತನಾ ಅವರು 'ಭೋಗದ ನೆಲೆ', 'ವೈರಾಗ್ಯದ ಪ್ರೇರಕ ನೆಲೆ' ಹಾಗೂ 'ಶೋಷಿತ ಮತ್ತು ಪ್ರತಿರೋಧದ ನೆಲೆ' ಎಂಬ ನೆಲೆಗಳಿಂದ ವಿಂಗಡಿಸಿ ನೋಡುವ ಕೆಲಸ ಮಾಡಿದ್ದಾರೆ. ಭೋಗದ ನೆಲೆಯಲ್ಲಿ ಗಂಡಿನ ಅಭಿಮಾನ, ಅಹಂಕಾರ, ಪ್ರತಿಷ್ಠೆಗಳ ತಿಕ್ಕಾಟದಲ್ಲಿ ಕಳೆದುಹೋಗುವ ಹೆಣ್ಣಿನ ಅಸ್ತಿತ್ವ ಯಾರ ಗಮನಕ್ಕೂ ಬಾರದಿರುವುದನ್ನು ತಿಳಿಸಿದರೆ, ವೈರಾಗ್ಯದ ಪ್ರೇರಕ ನೆಲೆಯಲ್ಲಿ ಸ್ತ್ರೀಯನ್ನು ವೈರಾಗ್ಯದ ಪ್ರಚೋದಿತಳಾಗಿಯೂ ಆಧ್ಯಾತ್ಮಿಕತೆಯಿಂದ ಲೌಕಿಕಕ್ಕೆ ಸೆಳೆಯುವಳು ಆಗಿ ಸಮಾಜ ನೋಡುವ ದೃಷ್ಟಿಕೋನವನ್ನು ವಿಮರ್ಶಿಸಿದ್ದಾರೆ. ಶೋಷಿತ ಮತ್ತು ಪ್ರತಿ ರೋಧದ ನೆಲೆಯಲ್ಲಿ ಹೆಣ್ಣಿನ ಲಿಂಗ ತಾತ್ಸಾರವನ್ನು ವಿಶೇಷವಾಗಿ ಅಮೃತಮತಿಯ ಪಾತ್ರದ ಮೂಲಕ ತಿಳಿಸುತ್ತ, ಸಾಂಪ್ರದಾಯಿಕ ನೆಲೆಯನ್ನು ದಾಟಿ ಆಯ್ಕೆಯ ನೆಲೆಯತ್ತ ಹೊರಟ ಸ್ತ್ರೀಯೂ ಪುರುಷಾಧೀನಳಾಗುವುದು ಮತ್ತು ಸಾಮಾಜಿಕ ನೀತಿ ಸಂಹಿತೆಯಾಚೆಗೆ ಹೋಗಿ ತನಗೆ ಬೇಕಾದದ್ದನ್ನು ಪಡೆದುಕೊಳ್ಳುವಾಗಲೂ ಹಿಂಸೆಗೆ ತುತ್ತಾಗುವುದನ್ನು ವಿಮರ್ಶಿಸಿದ್ದಾರೆ.

ಹಳಗನ್ನಡದಲ್ಲಿ ವಿರಳವಾಗಿದ್ದ ಮಹಿಳಾ ಧ್ವನಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಮೂಹಿಕವಾಗಿ ಪ್ರಬಲವಾಗಿದ್ದು ವಚನಯುಗದಲ್ಲಿ. ಲೌಕಿಕ ಬದುಕಿನೊಳಗಡೆಯೇ, ಆಧ್ಯಾತ್ಮಿಕ ಸಾಧನೆಯೂ ಸಾಧ್ಯ ಎಂಬುದನ್ನು ವಚನಕಾರರು ತಮ್ಮ ವಚನಗಳಲ್ಲಿ ಪ್ರಬಲವಾಗಿ ತಿಳಿಸುವ ಮೂಲಕ ಸಾಂಸಾರಿಕ ಬದುಕಿನಲ್ಲಿ ಸ್ತ್ರೀಗೆ ಸಮಾನ ನೆಲೆ ಕಲ್ಪಿಸಿಕೊಟ್ಟಿರುವುದನ್ನು ಗುರುತಿಸಿರುವ ಲೇಖಕಿ ಕೃತಿಯಲ್ಲಿ ವಚನಕಾರ್ತಿಯರ ವಚನಗಳಲ್ಲಿ 'ಸ್ವತಃ ಸ್ತ್ರೀ ತನ್ನ ಬಿಡುಗಡೆಗಾಗಿ ಪ್ರಯತ್ನಿಸಬೇಕು. ಎಲ್ಲಿಯವರೆಗೆ ಸ್ತ್ರೀ ತನ್ನ ಮೇಲಿನ ಒತ್ತಡ ಸ್ಥಾಪಿತ ಮೌಲ್ಯಗಳ ಅಧೀನತ್ವವನ್ನು ಕಳಚಲಾರಳೊ, ಅಲ್ಲಿಯವರೆಗೆ ಅವಳ ಅಸ್ಮಿತೆಯನ್ನು ನಿರ್ಮಿಸಿಕೊಳ್ಳಲು ಸಾಧ್ಯವಿಲ್ಲ. ಎಲ್ಲಿಯವರೆಗೆ ತನ್ನ ಹೆಗಲ ಮೇಲೆ ಹೇರಲ್ಪಟ್ಟಿರುವ ದಾಸತ್ವದ ನೊಗವನ್ನು ಎತ್ತಿ ಕೆಳಗಿಡಲಾರಳೊ, ಅಲ್ಲಿಯವರೆಗೂ ನೊಗದ ಭಾರ ಅವಳಿಗೆ ಹಿಂಸೆಯನ್ನು ನೀಡುತ್ತಲೇ ಇರುತ್ತದೆ. ಸ್ವಯಂ ಪ್ರೇರಿತ ಪ್ರಜ್ಞೆ ಅವಳಲ್ಲಿ ಅಂತರ್ಗತವಾಗಿ ನಿರಂತರವಾಗಿ ಪ್ರವಹಿಸುತ್ತ ಅವಳ ಚೈತನ್ಯವನ್ನು ಉಳಿಸಬೇಕು' ಎಂಬ ನಿಲುವು

ಕಂಡುಬಂದಿರುವುದನ್ನು ಗುರುತಿಸುತ್ತಾರೆ.

ವಚನಯುಗದಲ್ಲಿ ಎಲ್ಲ ಬಗೆಯ ದಾಸ್ಯಗಳಿಂದ ಮುಕ್ತವಾಗಿದ್ದ ಸಮಾಜ ಪುನಃ ವಚನೋತ್ತರ ಯುಗದಲ್ಲಿ ರಾಜಪ್ರಭುತ್ವದ ಸಂಕೋಲೆಗಳಿಗೆ ಒಳಗಾಗಿ ಸ್ತ್ರೀ ಸಮುದಾಯ ತಮಗೆ ದೊರೆತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡಿತೆಂದು ಅಭಿವ್ಯಕ್ತಪಡಿಸುವ ಚೇತನಾ ಅವರು ವಚನೋತ್ತರ ಕಾಲದಲ್ಲಿ ರಚನೆಯಾದ ಬಹುಪಾಲು ಸಾಹಿತ್ಯ ಹೆಣ್ಣನ್ನು ಪುರುಷ ಪ್ರಧಾನ ವ್ಯವಸ್ಥೆ ನಿರ್ಮಿಸಿದ ಪರಂಪರೆಯ ಚೌಕಟ್ಟಿನ ಅಡಿಯಲ್ಲಿ ಬಾಳುವಂತೆ ನಿರ್ದೇಶಿಸುವುದನ್ನು ಹಾಗೂ ಸ್ಥಾಪಿತ ಸ್ತ್ರೀ ಮಾದರಿಯನ್ನು ಬೆಂಬಲಿಸುವುದನ್ನು ತಿಳಿಸುತ್ತಾರೆ. ಈ ಕಾಲದಲ್ಲಿ ಮಹಿಳೆಯರಿಂದ ರಚನೆಯಾದ ಸಾಹಿತ್ಯವೂ ಕೂಡ ಪಿತೃಪ್ರಧಾನ ವ್ಯವಸ್ಥೆಯನ್ನು ಪೋಷಿಸುವಂತಹ, ಸಮರ್ಥಿಸುವಂತಹ ವಿಷಯಗಳನ್ನೇ ತಿಳಿಸುತ್ತವೆ. ಇದರ ನಡುವೆ ಈ ಕಾಲದಲ್ಲೇ ಮಹಿಳೆಯರಿಂದ ರಚಿತವಾದ ಸಾಹಿತ್ಯದಲ್ಲಿ ಸ್ತ್ರೀ ಅಸ್ಮಿತೆಯ ಹೊಳಹು ಕಂಡುಬಂದಿರುವುದನ್ನು ಗುರುತಿಸುವ ಲೇಖಕಿ ಸಂಚಿ ಹೊನ್ನಮ್ಮನ ಹದಿಬದೆಯ ಧರ್ಮ, ಶೃಂಗಾರಮ್ಮನ ಪದ್ಮಿನಿ ಕಲ್ಯಾಣ ಗ್ರಂಥ ಗಳಲ್ಲಿ, ಚೆಲುವಾಂಬೆಯ ವೆಂಕಟಾಚಲ ಮಹಾತ್ಮೆ ಮತ್ತು ವರನಂದಿ ಕಲ್ಯಾಣ ಕಾವ್ಯಗಳಲ್ಲಿ ಕವಯತ್ರಿಯರು ತನ್ನ ಸ್ವಂತಿಕೆ ಅಭಿಮಾನವನ್ನು ಕಾಯ್ದುಕೊಳ್ಳುವ ಮತ್ತು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ದಿಟ್ಟತನವನ್ನು ಅಭಿವ್ಯಕ್ತಿಪಡಿಸುವ ಅಂಶಗಳತ್ತ ಬೆಳಕು ಚೆಲ್ಲಿದ್ದಾರೆ. ಹೆಣ್ಣು ಮಗುವಿಗೆ ಹಂಬಲಿಸುವ ತಂದೆ ಹಾಗೂ ಆ ತಂದೆ ಹೆಣ್ಣು ಮಗು 'ವರನಂದಿ' ಜನಿಸಿದಾಗ ದಾನಧರ್ಮ ಮಾಡುವುದು, ಸಂಭ್ರಮಿಸುವುದನ್ನು ಚಿತ್ರಿಸುವ ಮೂಲಕ ಪಿತೃವಾತ್ಸಲ್ಯ ಹೆಣ್ಣಿಗೂ ದೊರಕಬೇಕು, ಹೆಣ್ಣು ಮಕ್ಕಳ ಜನನವೂ ಸಂಭ್ರಮದ, ಸಂತೋಷದ ಸಮಯವಾಗಿರಬೇಕು ಎಂಬ ಆಶಯವು ಇರುವುದನ್ನು ಗುರುತಿಸಿದ್ದಾರೆ.

ವಚನಯುಗದ ನಂತರದ ಭಕ್ತಿಪರಂಪರೆಯನ್ನು ಮುಂದುವರಿಸಿದ ಹ ರಿದಾಸ ಪರಂಪರೆಯಲ್ಲಿಯ ಮಹಿಳಾದಾಸ ಸಾಹಿತ್ಯದಲ್ಲಿ ಸ್ತ್ರೀ ಸ್ವರೂಪವನ್ನು ಹುಡುಕುವ ಕೆಲಸ ಮಾಡಿರುವ ಚೇತನಾ ಅವರು 'ಗಲಗಲಿ ಅವ್ವ' ಎಂದು ಪ್ರಸಿದ್ಧಳಾದ 'ರಮಾಬಾಯಿ' ಪ್ರಥಮ 'ದಾಸ ಮಹಿಳೆ'ಯಾಗಿದ್ದು ಈಕೆಯೂ 'ಶ್ರೀ ರಾಮೇಶ' ಎಂಬ ಮುದ್ರಿಕೆಯಲ್ಲಿ ಅನೇಕ ರಚನೆಗಳನ್ನು ಮಾಡಿರುವುದನ್ನು ಮತ್ತು ಆಕೆಯ ಶಿಷ್ಯೆ ಭಾಗ್ಯಮ್ಮ ಭಾಗವತನಾಮ ಸಂಕೀರ್ತನೆಯನ್ನು ತನ್ನ ಕಾವ್ಯದ ವಸ್ತುವಾಗಿರಿಸಿಕೊಂಡು ಸಾಹಿತ್ಯ ಸೇವೆ ಸಲ್ಲಿಸಿದ್ದಾಗಿ ತಿಳಿಸಿದ್ದಾರೆ. ಮುಂದುವರೆದು ಹೆಳವನಕಟ್ಟೆ ಗಿರಿಯಮ್ಮ ಜಾನಪದದ ಹಿನ್ನಲೆಯಲ್ಲಿ ತಾತ್ವಿಕ ವಿಷಯಗಳನ್ನು ಸಹಜವಾಗಿ ನಿರೂಪಿಸುತ್ತ ಹೆಣ್ಣಿನ ಅಂತರಂಗದ ಒಳನೋಟ, ತುಮುಲಗಳನ್ನು,

ಬಹುಪತ್ನಿತ್ವ, ಸವತಿಮಾತ್ಸರ್ಯ, ಪುರುಷನ ಸಮಾಜ ಸಾಧಕತ್ವ ಸನ್ನಿವೇಶಗಳಲ್ಲಿ ಕಟ್ಟಿಕೊಡುವುದನ್ನು, ಹರಪನಹಳ್ಳಿ ಭೀಮವ್ವ ತನ್ನ ಸಾಹಿತ್ಯದುದ್ದಕ್ಕೂ ಕೃಷ್ಣಭಕ್ತಿ ಹಾಸುಹೊಕ್ಕಿಸಿರುವುದನ್ನು, ಮುದ್ದುವೆಂಕಟ, ವೆಂಕಟಕೃಷ್ಣ ಎಂಬ ಅಂಕಿತಗಳಿಂದ ಪ್ರಸಿದ್ಧರಾದ ಯದುಗಿರಿಯಮ್ಮ ತಮ್ಮ ಕೆಲವು ಕೀರ್ತನೆಗಳಲ್ಲಿ ಸಮಾಜದ ಡೊಂಕನ್ನು ತಿದ್ದುವ ಪ್ರಯತ್ನ ಮಾಡಿರುವುದನ್ನು ತಿಳಿಸಿದ್ದಾರೆ. 'ನಿಂಬರಗಿ ಗುರು' ಎಂಬ ಅಂಕಿತದಲ್ಲಿ ತತ್ತ್ವಪದಗಳನ್ನು ಬರೆದು ಶಿವಲಿಂಗವ್ವ ಜತ್ತಿ 'ಕನ್ನಡದ ಮೊದಲ ತತ್ತ್ವಪದಕಾರ್ತಿ' ಎಂದು ಗುರುತಿಸುವ ಲೇಖಕಿ ತಾತ್ವಿಕವಾದ ಸಾಧನಾ ಪಂಥಗಳಲ್ಲಿ ತತ್ವಪದಕಾರ್ತಿಯರಲ್ಲಿ ಸ್ತ್ರೀತ್ವ, ಗೃಹಿಣಿತ್ವ, ಅಬಲತ್ವ, ಬೌದ್ಧಿಕ ಅಬಲತ್ವದ ಮಾದರಿ ಮೀರುವಂತಹ ದಿಟ್ಟ ನಡೆ ಇರುವುದನ್ನು ಗುರುತಿಸುವ ಕೆಲಸ ಮಾಡಿದ್ದಾರೆ.

ವಚನ ಸಾಹಿತ್ಯದ ನಂತರದಲ್ಲಿ ಇಳಿಮುಖವಾಗಿದ್ದ ಸ್ತ್ರೀ ಸಾಹಿತ್ಯ ಮತ್ತೆ ತನ್ನ ಇರುವಿಕೆಯನ್ನು ಧೃಡವಾಗಿ ವ್ಯಕ್ತಪಡಿಸಿದ್ದು ನವೋದಯ ಕಾಲಘಟ್ಟದಲ್ಲಿ ಎಂದು ಗುರುತಿಸುವ ಲೇಖಕಿ ಈ ಕಾಲಘಟ್ಟದ ಲೇಖಕಿಯರ ಕಥಾವಸ್ತು ಹಂದರದ ಆಧಾರದ ಮೇಲೆ ಎರಡು ನೆಲೆಗಳನ್ನು ಗುರುತಿಸಿದ್ದು, ಅವುಗಳೆಂದರೆ ಶೋಷಣೆಯ ಅನಾವರಣದ ಹೆಜ್ಜೆ ಮತ್ತು ಪ್ರಗತಿಪರ ಹೆಜ್ಜೆ. ಮೊದಲ ಹೆಜ್ಜೆಯ ಕಥೆಗಳಲ್ಲಿ ಬಹುಪಾಲು ಸ್ತ್ರೀ ಪಾತ್ರಗಳು ತನ್ನತನವನ್ನು ಅದುಮಿಡುತ್ತಾ ಉಸಿರು ಕಟ್ಟಿಸುವ ವಾತಾವರಣದಲ್ಲಿ ಅನಿವಾರ್ಯವಾಗಿ ಬದುಕುತ್ತಿರುವಂತವುಗಳು. ಪರಿಸ್ಥಿತಿಯ ಒತ್ತಡದಲ್ಲಿ ಸಮಾಜದ ವಂಚನೆ, ಕ್ರೌರ್ಯಕ್ಕೆ ಬಲಿಯಾದವುಗಳು. ತಮಗಾದ ಅನ್ಯಾಯದ ವಿರುದ್ಧ ಹೋರಾಡಲಾಗದೆ, ಸಮಾಜದ ತಿರಸ್ಕಾರಗಳಿಗೆ ಹೆದರಿ ಆತ್ಮಹತ್ಯೆಗೆ ಶರಣಾದವುಗಳು. ತಮ್ಮ ನೋವನ್ನು ನುಂಗಿಕೊಂಡು, ದಬ್ಬಾಳಿಕೆಯನ್ನು ಸಹಿಸುತ್ತಾ ಜೀವಂತ ಶವದಂತೆ ಬದುಕುತ್ತಿರುವಂತವುಗಳು. ಎರಡನೆಯ ಹೆಜ್ಜೆಯ ಕಥೆಗಳಲ್ಲಿಯ ಸ್ತ್ರೀ ಪಾತ್ರಗಳ ಹೆಣ್ತನದ ಹುಡುಕಾಟ, ಅವಳ ಅರಿವಿನ ಸ್ಥಿತಿ, ಸಮಾಜದ ನಿರೀಕ್ಷೆಗಳು ಬೇರೆ ಬೇರೆ. ಆಕೆಯ ಮನಸ್ಸಿನ ಭಾವನೆಗಳು ಸ್ಥಾಪಿತ ಸ್ಥಿತಿಗಿಂತ ಬೇರೆಯಾಗಿರುವ ಸಾಧ್ಯತೆಗಳಿವೆ. ಹೆಣ್ಣು ಎಂಬ ಜೈವಿಕ ಭಿನ್ನತೆಯ ಮೇಲೆ ಸಮಾಜ ಹಲವಾರು ಸಾಧ್ಯತೆಗಳನ್ನು ಆರೋಪಿಸಿರುತ್ತದೆ. ಆದರೂ ಕೆಲವೊಮ್ಮೆ ಪರಿಸ್ಥಿಯ ಕೈಗೊಂಬೆಯಾಗಿ, ಮೌನವಾಗಿ ತನ್ನತನವನ್ನು ದಾಟಿ, ತನ್ನ ಆಯ್ಕೆಯ ಪ್ರವೃತ್ತಿಗಳನ್ನು ಒಪ್ಪಿಕೊಂಡು ಹೆಣ್ಣು ಸಾಗುವ ಸ್ಥಿತಿಯಲ್ಲಿ ಇರುವಂತವುಗಳು.

ಪ್ರಗತಿಶೀಲ ಕಾಲಘಟ್ಟದ ರಚನೆಗಳು ಸಾಂಪ್ರದಾಯಿಕ ಪರಂಪರಾನುಗತ ವಿಚಾರಗಳಲ್ಲಿ ಅಸಹನೆ ತೋರಿಸುತ್ತ, ಹೊಸತನದ ಅಭಿವ್ಯಕ್ತಿ ಎಂಬಂತೆ ಇದ್ದರೂ ಈ ಕಾಲಘಟ್ಟದ ಕಥೆಗಾರ್ತಿಯರಲ್ಲಿ ಗಾಢವಾಗಿ ಸಾಮಾಜಿಕ ಪ್ರಜ್ಞೆಯ ಕಥೆಗಳು ಗಣನೀಯ ಪ್ರಮಾಣದಲ್ಲಿ ಕಂಡು ಬರುವುದಿಲ್ಲ. ಶೋಷಣೆಯ ಅನಾವರಣ

ಹೆಜ್ಜೆಯ ಕಥೆಗಳಲ್ಲಿ ಸ್ತ್ರೀಮಾದರಿಗಳಲ್ಲಿ ವೈವಿಧ್ಯತೆ ಇದ್ದು, ವರ್ಗ, ಜಾತಿ, ಲಿಂಗ, ವೈಷಮ್ಯ ಇವುಗಳ ನಡುವೆ ಸ್ತ್ರೀಯ ಬದುಕನ್ನು ಅಂತತ್ರವಾಗಿರುವ ಚಿತ್ರಣಗಳು ಇವೆ. ಆ ಮೂಲಕ ಹೆಣ್ಣಿನ ಬದುಕಿನ ಸೂಕ್ಷ್ಮ ಪರಿಸ್ಥಿತಿಯನ್ನು ಸಮರ್ಪಕವಾಗಿ ಮೊದಲ ಹೆಜ್ಜೆಯ ಕಥೆಗಳು ಹಿಡಿದಿಡುತ್ತವೆ. ಪ್ರಗತಿಪರ ಹೆಜ್ಜೆಯ ಕಥೆಗಳೆಲ್ಲದರಲ್ಲೂ ಪ್ರಗತಿಪರ ಕ್ರಾಂತಿಕಾರಕ ಅಲೆ ಇಲ್ಲದಿದ್ದರೂ ಹೆಣ್ಣಿನ ಬದುಕಿನ ಸೂಕ್ಷ್ಮಭಾವನೆ, ತಲ್ಲಣ, ಅನಿಶ್ಚಿತತೆ, ಸಮಾಜದ ಇಬ್ಬಗೆಯ ನೀತಿ ಪ್ರತಿಬಿಂಬಿಸುತ್ತವೆ.

'ನವ್ಯ' ಕಾಲಘಟ್ಟದ ರಚನೆಗಳಲ್ಲಿ ಸ್ತ್ರೀ ಪುರುಷ ಪ್ರಧಾನ ಚೌಕಟ್ಟನ್ನು ದಾಟಿ ತನ್ನತನವನ್ನು ನಿರ್ವಚಿಸಿಕೊಳ್ಳುವ ಪ್ರಯತ್ನದ ಸ್ಪಷ್ಟ ಹೆಜ್ಜೆ ಗುರುತುಗಳನ್ನು ಗುರುತಿಸಿರುವ ಲೇಖಕಿ ನವ್ಯ ಕಾಲಘಟ್ಟದಲ್ಲಿ ರಚನೆಯಾದ ಸಾಹಿತ್ಯವನ್ನು ವ್ಯವಸ್ಥೆಯ ಬಂಧಿತ ನೆಲೆ, ಮನೋಲೈಂಗಿಕ ನೆಲೆ ಮತ್ತು ಅನನ್ಯತೆಯ ನೆಲೆಗಳಲ್ಲಿ ಗುರುತಿಸುವ ಕೆಲಸ ಮಾಡಿದ್ದಾರೆ. ಮೊದಲ ನೆಲೆಯ ಕಥೆಗಳು ವ್ಯವಸ್ಥೆಯನ್ನು ಮೀರಲಾಗದೆ ಅಸಹನೀಯ ಬದುಕಿನಲ್ಲಿ ಕಳೆದು ಹೋಗುವ ಬಂಧಿತ ಸ್ಥಿತಿಯನ್ನು ಅನಾವರಣಗೊಳಿಸುತ್ತ, ಭಾರತೀಯ ಸಂಸ್ಕೃತಿಯಲ್ಲಿ ಯಶಸ್ವಿ ವೃತ್ತಿಯ ಭದ್ರತೆಗಿಂತಲೂ ಹೆಣ್ಣಿಗೆ ಕೌಟುಂಬಿಕ ಜೀವನದ ಭದ್ರತೆಯೇ ಮುಖ್ಯ ಎಂದು ಹೆಣ್ಣು ಯೋಚಿಸುವಂತೆ ಮಾಡಿರುವ ವ್ಯವಸ್ಥೆಯ ಬಂಧನವನ್ನು ಸೂಕ್ಷ್ಮ ಗ್ರಹಿಕೆಯಿಂದ ಅಭಿವ್ಯಕ್ತಿಸುತ್ತವೆ. ಎರಡನೆ ನೆಲೆಯ ಕಥೆಗಳು ಲೈಂಗಿಕತೆ ಜೈವಿಕ ಮೂಲದ್ದಾದರೂ ಸ್ತ್ರೀಯ ಲೈಂಗಿಕ ಅತೃಪ್ತಿಯನ್ನು ಮತ್ತು ತಮ್ಮ ಲೈಂಗಿಕ ಅಭೀಪ್ಸೆಯ ನೇರ ಅಭಿವ್ಯಕ್ತಿಯನ್ನು ಸಮಾಜ ನಿರೀಕ್ಷಿಸದೆ ಪುರುಷ ಪ್ರಧಾನ ಸಮಾಜದ ಪವಿತ್ರ–ಅಪವಿತ್ರ, ನೈತಿಕ–ಅನೈತಿಕವೆಂಬ ಪರಿಕಲ್ಪನೆಗಳ ಮೂಲಕ ಅವಳ ಬಯಕೆಗಳನ್ನು ನಿರ್ಬಂಧಿಸುವುದನ್ನು ಚಿತ್ರಿಸುತ್ತವೆ. ಅಂತರಂಗದ ಸುಪ್ತ ಆಪೇಕ್ಷೆಗಳೂ ಬಹಿರಂಗದ ಸ್ಥಿತ ಪ್ರಜ್ಞೆಯ ಕಾಣಿಸುವಿಕೆಯೂ ಮುಖಾಮುಖಿಯಾಗುತ್ತ ಅವಳಲ್ಲಿ ಸಂಘರ್ಷವನ್ನು ಉಂಟುಮಾಡುವ ಪ್ರಕ್ರಿಯೆಯನ್ನು ಇಲ್ಲಿಯ ಕಥೆಗಳು ಶೋಧಿಸುವ ಮೂಲಕ ಮನೋಲೈಂಗಿಕ ನೆಲೆ ತಲುಪುತ್ತವೆ. ಮೂರನೇ ನೆಲೆಯ ಕಥೆಗಳು ಮನುಷ್ಯನಲ್ಲಿರುವ ಸ್ವಾರ್ಥದ ಹಲವು ಮುಖಗಳನ್ನು ಪರಿಚಯಿಸುತ್ತ, ಹೊಸತನದ, ಹೊಸಜಾಡಿನ ಪಾತ್ರ ರಚನೆಯ ಅಭಿವ್ಯಕ್ತಿ ವಿಧಾನದ ಮೂಲಕ ಹೊಸ ಪರಿಸರ, ಅಲ್ಲಿನ ಒತ್ತಡಗಳಿಗಿಂತ ಹೆಚ್ಚಾಗಿ ಆಂತರಿಕ ವಲಯದಲ್ಲಿ ನಡೆಯುವ ತುಮುಲ, ದ್ವಂದ್ವ, ತನ್ನೊಳಗಿನ ಹೋರಾಟವನ್ನು ಮುಖ್ಯವಾಗಿಸುತ್ತವೆ. ಆ ಮೂಲಕ ಸ್ತ್ರೀ ಅಸ್ಮಿತೆ, ಅಸ್ತಿತ್ವ, ಸ್ವಂತಿಕೆ ಎಲ್ಲ ಮಾದರಿಯ ಸಂವೇದನೆಗಳನ್ನು ಪ್ರತಿಬಿಂಬಿಸುತ್ತವೆ.

1970ರ ನಂತರದ ಕಾಲದ ಕಥೆಗಳನ್ನು ಲೇಖಕಿ ಶೋಷಿತ ನೆಲೆ ಮತ್ತು ಪ್ರತಿಭಟನಾ ನೆಲೆಯೆಂದು ಗುರುತಿಸುವ ಕೆಲಸ ಮಾಡಿದ್ದಾರೆ. ಮೊದಲನೆ ನೆಲೆಯ

ಕಥೆಗಳಲ್ಲಿ ದಲಿತ ಸ್ತ್ರೀಯ ಅಸ್ಮಿತೆಯ ಹುಡುಕಾಟ, ಅವಳ ಅಭಿಲಾಷೆಗಳು ಮುಖಾಮುಖಿಯಾಗುತ್ತವೆ. ಹೆಣ್ಣನ್ನು ಮನುಷ್ಯಳಾಗಿ ಪರಿಗಣಿಸದೆ ವಸ್ತುವಾಗಿ ಮನಬಂದಂತೆ ಉಪಯೋಗಿಸಿಕೊಳ್ಳುವ ಗಂಡಿನ ದಬ್ಬಾಳಿಕೆ ಶೋಷಣೆಯನ್ನು ಮತ್ತು ಅದರಲ್ಲಿ ಸಿಕ್ಕಿ ನರಳುವ ಹೆಣ್ಣಿನ ಸಂಕಟವನ್ನು ಅಭಿವ್ಯಕ್ತಿಸುತ್ತವೆ. ಕೆಳವರ್ಗದ ವ್ಯಕ್ತಿಗಳನ್ನು ಮೇಲ್ವರ್ಗದ ಜನ ಮಾತ್ರ ಹಿಂಸಿಸಿ ಶೋಷಿಸುತ್ತಾರೆ ಎಂಬ ಚಿಂತನೆಗಿಂತ ಭಿನ್ನವಾಗಿ ಆಯಾ ಸಮುದಾಯದಿಂದಲೂ ವ್ಯಕ್ತಿಗಳ ಶೋಷಣೆ ಸಾಧ್ಯ ಎಂಬುದನ್ನು ನಿರೂಪಿಸುತ್ತವೆ. ಸ್ತ್ರೀ ಕೇವಲ ಮೇಲ್ವರ್ಗದ ಪುರುಷರಿಂದ ಮಾತ್ರವಲ್ಲ ತನ್ನ ವರ್ಗದ ಪುರುಷರಿಂದಲೂ ಶೋಷಣೆಗೆ ಒಳಗಾಗುತ್ತಾಳೆ ಎಂಬುದನ್ನು ತಿಳಿಸುತ್ತವೆ. ಹೆಣ್ಣು ಬದುಕಿದ್ದಾಗ ಮಾತ್ರವಲ್ಲದೆ ಸತ್ತಾಗಲೂ ಅವಳ ಚಾರಿತ್ರ್ಯವನ್ನೇ ತಕ್ಕಡಿಯಲ್ಲಿಟ್ಟು ತೂಗುವ ಸಮಾಜದ ದೌರ್ಬಲ್ಯವನ್ನು ಎತ್ತಿಹಿಡಿಯುತ್ತವೆ. ಹೀಗೆ ಸಮಾಜದ ಭಾವನೆಗಳಿಗೆ ಶೋಷಣೆಯ ಹಲವು ಮುಖಗಳು ಇನ್ನೂ ಇವೆ ಎಂಬದನ್ನು ಗೊತ್ತುಪಡಿಸುತ್ತವೆ. ಎರಡನೆಯ ನೆಲೆಯ ಕಥೆಗಳು ತಮಗೆದುರಾದ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ ಛಲದಿಂದ ಮುನ್ನಡೆಯುವ ಸ್ತ್ರೀ ಮಾದರಿಗಳನ್ನು ಕಟ್ಟಿಕೊಡುತ್ತವಷ್ಟೇ ಅಲ್ಲದೆ ಸ್ತ್ರೀ ಶೋಷಣೆಯನ್ನು ಅನಾವರಣ ಮಾಡುತ್ತಲೆ ಸ್ತ್ರೀ ಕೂಡಾ ಪುರುಷನನ್ನು ಶೋಷಿಸಬಲ್ಲಳು ಎಂಬುದನ್ನು ದಾಖಲಿಸುತ್ತವೆ. ಅತ್ಯಾಚಾರ, ವಿವಾಹ ಬಾಹಿರ ಸಂಬಂಧ, ವ್ಯಭಿಚಾರ ಮುಂತಾದ ಪರಿಸ್ಥಿತಿಗಳಿಗೆ ಅನಿವಾರ್ಯವಾಗಿ ಸಿಲುಕಿದ ಹೆಣ್ಣು ಸಮಾಜಕ್ಕೆ ಹೆದರಿ ಪಲಾಯನಕ್ಕೆ ತೊಡಗದೆ ಎದುರಿಸಬೇಕಾದ ದಿಟ್ಟತನದ ಅಗತ್ಯವನ್ನು ಅಭಿವ್ಯಕ್ತಿಸುತ್ತವೆ. ಆ ಮೂಲಕ ತಾನು ನಿರ್ಮಿಸಿದ ಚೌಕಟ್ಟಿನಿಂದ ಹೊರಬಂದ ಹೆಣ್ಣನ್ನು ತುಚ್ಛೀಕರಿಸುವ ಪುರುಷ ಪ್ರಧಾನ ಸಮಾಜದ ದೃಷ್ಟಿಕೋನ ಪರಿವರ್ತಿತವಾಗಿ ಮಾನವೀಯ ನೆಲೆಯಲ್ಲಿ ಸಾಗಬೇಕಾದ ತುರ್ತನ್ನು ಪ್ರತಿಬಿಂಬಿಸುತ್ತವೆ.

ಮುಸ್ಲಿಂ ಸ್ತ್ರೀ ಸಂವೇದನೆಯನ್ನು ಸಾರಾ ಅಬೂಬಕರ್ ಮತ್ತು ಬಾನು ಮುಷ್ತಾಕ್ ಅವರ ಕಥೆಗಳ ಮೂಲಕ ವಿಮರ್ಶಿಸುತ್ತ ಧಾರ್ಮಿಕ ಹಿನ್ನೆಲೆಯಲ್ಲಿ, ಧಾರ್ಮಿಕ ಅನುಭವಗಳ ಜೊತೆಯಲ್ಲಿ ಮುಸ್ಲಿಂ ಹೆಣ್ಣುಮಕ್ಕಳಿಗಾಗುತ್ತಿರುವ ಸಂಕಟ, ಪರಿಪಾಟಲನ್ನು ಹೇಳುವ ಕೆಲಸ ಮಾಡಿದ್ದಾರೆ. ಸಾರಾ ಮತ್ತು ಬಾನು ಅವರ ಕಥೆಗಳಲ್ಲಿ ಮುಸ್ಲಿಂ ಸಮುದಾಯದಲ್ಲಿ ಹೆಣ್ಣು ದೇಹವಾಗಿ ಮಾತ್ರ ಪರಿಗಣಿಸಲ್ಪಡುತ್ತಿದ್ದು ಅವಳ ಭಾವನೆಗಳಿಗೆ ಯಾವ ಮಹತ್ವವೂ ಇಲ್ಲದ ಸೂಕ್ಷ್ಮಗಳು ಚರ್ಚಿತವಾಗಿದ್ದು, ಆ ಮೂಲಕ ಮುಸ್ಲಿಂ ಸಮುದಾಯದಲ್ಲಿ ಸ್ತ್ರೀಯ ಅಸ್ಮಿತೆಯನ್ನು ಹುದುಗಿಸಿ ಅವಳ ಅಸ್ತಿತ್ವವನ್ನು ಕಡೆಗಣಿಸುವ, ನಿರಾಕರಿಸುವ ಅಂಶಗಳನ್ನು ಕಟ್ಟಿಕೊಡುತ್ತವೆ. ಪುರುಷ ಪ್ರಾಧಾನ್ಯತೆಯ ಅಧಿಕಾರದ ಹಂಬಲದ ದರ್ಪದ ವ್ಯಕ್ತಿಗಳನ್ನು ಪರಿಚಯಿಸುವಂತೆ

ಸಾರಾ ಅವರ ಕಥೆಗಳು ಆಧುನಿಕ ತರುಣರಲ್ಲಿ ಬದಲಾಗುತ್ತಿರುವ ಮನೋಭಾವವನ್ನೂ ಬಿಂಬಿಸಿದರೆ, ಬಾನು ಅವರ ಕಥೆಗಳು ಸ್ಥಗಿತಗೊಂಡಿದ್ದ ಮುಸ್ಲಿಂ ಜಗತ್ತಿನಲ್ಲೇ ಒಂದು ಪ್ರತಿರೋಧದ ಅಲೆ ಸಾವಕಾಶವಾಗಿ ಏಳುತ್ತಿರುವುದನ್ನು ದಾಖಲಿಸುತ್ತವೆ. ಹೀಗೆ ತಮ್ಮ ಸಂಸ್ಕೃತಿಯ ವಿವರಗಳನ್ನು ಧಾರ್ಮಿಕ ವಲಯದ ನಂಬಿಕೆಗಳನ್ನು ಜನರನ್ನು ಸುತ್ತುವರೆದಿರುವ ಮೌಢ್ಯವನ್ನು, ಹೆಣ್ಣಿನ ಬದುಕಿನ ಕತ್ತಲ ವಿವಿಧ ಮುಖಗಳನ್ನು ಮುಸ್ಲಿಂ ಲೇಖಕಿಯರು ಬಿಂಬಿಸುತ್ತಿರುವುದನ್ನು ಅವರ ಕಥೆಗಳ ಮೂಲಕ ಗುರುತಿಸಲಾಗಿದೆ.

ಸ್ತ್ರೀ ಸಮಸ್ಯೆಗಳನ್ನು ಸ್ತ್ರೀ–ಪುರುಷರಿಬ್ಬರ ರಚನೆಗಳು ಅನಾವರಣಗೊಳಿಸಲು ಸಾಧ್ಯವಿದ್ದರೂ ಕೂಡ ಸ್ತ್ರೀ ಸಂವೇದನೆ ಎಂಬ ಪ್ರತ್ಯೇಕತೆ ಏಕೆ ಬೇಕು? ಎಂಬ ಪ್ರಶ್ನೆಗೆ ಉತ್ತರವನ್ನು ಶೋಧಿಸುವ ಪ್ರಯತ್ನ ನಡೆದಿದೆ. ವಿನಯ, ವಿಧೇಯತೆ, ಪಾತಿವ್ರತ್ಯಗಳೆಂಬ ಸ್ಥಾಪಿತ ಪರಿಕಲ್ಪನೆಯಡಿಯಲ್ಲಿ ಬದುಕಿನ ಸ್ತ್ರೀಯ ಅಂತರಂಗದ ಅಳಲು ಭಿನ್ನವಾಗಿರುವ ಸಾಧ್ಯತೆ ಇದೆ. ತನಗೆ ಒಲ್ಲದ, ಬೇಕಿರದ ಅನುಭವಕ್ಕೆ ಒಗ್ಗಿಕೊಳ್ಳುವಲ್ಲಿ ಸಂಸ್ಕೃತಿಯ ಒತ್ತಡಗಳು ಕೆಲಸ ಮಾಡುತ್ತಿರುತ್ತವೆ. ಆದರೆ ಪುರುಷ ಅದನ್ನು ಅಭಿವ್ಯಕ್ತಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಕಾವ್ಯಗಳಲ್ಲಿ ರಾಜನ ವಿಜಯ ಘೋಷಣೆಗೆ ಮುಖಾಮುಖಿಯಾಗಿ ರಾಣಿಯ ಒಂಟಿತನದ ತಲ್ಲಣಗಳು ದಾಖಲಾಗುವುದೇ ಇಲ್ಲ. ಅವನದ್ದೆ ಆದ ಇತಿಹಾಸದಲ್ಲಿ ಅವನ ಶೌರ್ಯ, ಸೋಲು, ಗೆಲುವು, ಸಾಹಸಗಾಥೆಗಳ ವೈಭವೀಕರಣದ ನಡುವೆ ಅವಳ ಮನಸ್ಸು ಮುರುಟಿ ಹೋಗಿದ್ದು ಯಾರ ಗಮನಕ್ಕೂ ಬಾರುವುದಿಲ್ಲ. ಆದ ರೆ ಸ್ತ್ರೀ ಸಂವೇದನೆ ಎಂಬುದು ಸ್ತ್ರೀಯ ದೈಹಿಕ, ಸಾಮಾಜಿಕ ಅನುಭವವನ್ನು, ಅಲ್ಲಿನ ಗ್ರಹಿಕೆಯನ್ನು, ಅವಳ ಬದುಕಿನ ಸೂಕ್ಷ್ಮಗಳನ್ನು ದಾಖಲಿಸುತ್ತವೆ. ಸ್ತ್ರೀ ಸಂವೇದನೆಯೆಂಬುದು ಸ್ತ್ರೀ ತನ್ನ ಬದುಕಿನ ಅನುಭವಗಳನ್ನು ಗುರುತಿಸಿರುವ ಗ್ರಹಿಸಿರುವ, ಅಭಿವ್ಯಕ್ತಿಸಿರುವ ಅಲೋಚನೆಗಳ ಮೊತ್ತವಾದ ಕಾರಣ ಅದರ ಅಗತ್ಯತೆಯಿದೆ ಎಂದು ಲೇಖಕಿ ಅಭಿಪ್ರಾಯಪಡುತ್ತಾರೆ.ಸ್ತ್ರೀಯ ಜೈವಿಕ, ಸಾಮಾಜಿ ಕ, ಸಾಂಸ್ಕೃತಿಕ, ಮಾನಸಿಕ ಅಸ್ಮಿತೆಯಲ್ಲಿ ಬದಲಾವಣೆಯನ್ನು ದಾಖಲಿಸುತ್ತ, ಸ್ತ್ರೀ ಸಂವೇದನೆಯ ಹಲವು ಸೂಕ್ಷ್ಮತೆಯನ್ನು ಅನಾವರಣಗೊಳಿಸುತ್ತ, ಹೊಸಹೆಣ್ಣನ್ನು ಕಟ್ಟುವ ಪ್ರಯತ್ನದಲ್ಲಿ ಮಹಿಳಾ ಕಥಾಸಾಹಿತ್ಯ ಯಶಸ್ವಿಯಾಗಿರುವುದನ್ನು ತಮ್ಮ ಕೃತಿಯಲ್ಲಿ ಅನಾವರಣಗೊಳಿಸುತ್ತಾರೆ.

ಸಮಕಾಲೀನ ಮಹಿಳಾ ಕಥಾ ಸಾಹಿತ್ಯವು ಎಲ್ಲ ಅರಿವನ್ನು ಒಡಲುಗೊಂಡು ಕೂಡ ಯಾವುದೇ ಒಂದು ಸಿದ್ಧಾಂತಕ್ಕೆ ಅಂಟಿಕೊಳ್ಳದೆ ಮುಕ್ತವಾಗಿ ದಾಖಲಾಗುತ್ತಿದೆ. ಇಂದಿನ ಮಹಿಳಾ ಕಥಾ ಸಾಹಿತ್ಯದ ಸಾಮಾಜಿಕ ಅನುಭವ ಜಗತ್ತು ವಿಸ್ತಾರವಾಗಿ

ಮನಸ್ಸಿನ ಆಳದಲ್ಲಿರುವ ಸೂಕ್ಷ್ಮತೆಗಳು ಮುಕ್ತವಾಗಿ ಅಭಿವ್ಯಕ್ತಿಗೊಳ್ಳುತ್ತಿರುವುದನ್ನು ಗುರುತಿಸುತ್ತಾರೆ. ಕಳೆದ ದಶಕದಿಂದ ಇತ್ತೀಚೆಗೆ ಲೇಖಕಿಯರು ಬರೆಯುತ್ತಿರುವ ಕಥೆಗಳಲ್ಲಿ 'ಹೆಣ್ಣನ್ನು, ಅವಳ ಹೆಣ್ತನದ ಭಾವಗಳನ್ನು, ಸಂವೇದನೆಗಳನ್ನು, ಅನನ್ಯತೆಗಳನ್ನು ಅವಳ ದೇಹದ ಮಿಡಿತಗಳನ್ನು ಗುರುತಿಸುವ ಕ್ರಮ ಆರಂಭವಾಗಿದೆ. ಕಥೆಯ ವಸ್ತು ಮತ್ತು ಭಾಷೆಗಳಲ್ಲಿ ವೈವಿಧ್ಯತೆಗಳು ಗೋಚರಿಸಿ, ಭಿನ್ನ ಸಾಧ್ಯತೆಗಳ ಹುಡುಕಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಸ್ತ್ರೀಮಾದರಿಗಳು ಕಂಡುಬರುತ್ತಿವೆ. ಅವಳ ಅನುಭವದ ಲೋಕ ತೆರೆದು ಅಲ್ಲಿನ ಸಾಂಸ್ಕೃತಿಕತೆ, ಗಂಡು–ಹೆಣ್ಣಿನ ಸಂಬಂಧಗಳ ಬದಲಾವಣೆ, ಅವಳ ಒಳಭಿತ್ತಿಗಳು, ಅವಳು ಧರಿಸಬಹುದಾದ ಮುಖವಾಡ, ಅವಳಲ್ಲಿರಬಹುದಾದ ತಣ್ಣಗಿನ ಕ್ರೌರ್ಯಗಳು, ಸಿದ್ಧಮಾದರಿತ್ವದ ಒಳಗಿದ್ದೇ ಅದನ್ನು ಮುರಿದು ಹೊಸ ಬದುಕು ನಿರ್ಮಿಸುವ ರೀತಿ ಎಲ್ಲವೂ ಇಂದಿಗೆ ಯಾವ ಅಂಜಿಕೆ ಇಲ್ಲದೆ ನಿರ್ಭೀಡೆಯಿಂದ ಅಭಿವ್ಯಕ್ತವಾಗುತ್ತಿದೆ. ಸ್ತ್ರೀಯರು ಸ್ವಯಂ ನಿರ್ಬಂಧಿತ ಮಿತಿಗಳನ್ನು ಮೀರಿ ಬರೆಯುವ ಆತ್ಮವಿಶ್ವಾಸ ತೋರುತ್ತಿದ್ದಾರೆ. ಭಿನ್ನವಾಗಿ, ದಿಟ್ಟವಾಗಿ ನಿರ್ಭಿಡೆಯಿಂದ ಹೊರಬರುತ್ತಿರುವ ಮಹಿಳಾ ಧ್ವನಿ ತನ್ನದೇ ಆದ ವಿಶಿಷ್ಟತೆಯಿಂದ ಗಮನ ಸೆಳೆಯುತ್ತಿರುವುದನ್ನು' ಚೇತನಾ ಅವರು ಗುರುತಿಸಿದ್ದಾರೆ.

ಕೃತಿಯ ಕಡೆಯ ಲೇಖನವು ಕೃತಿಗೆ ಒಂದು ರೀತಿಯ ಉಪಸಂಹಾರದ ರೀತಿಯಿದ್ದು ಇದರಲ್ಲಿ ಲೇಖಕಿ ಸಂಪೂರ್ಣ ಹೊಸಗನ್ನಡ ಕಥಾಸಾಹಿತ್ಯ ಪ್ರಪಂಚದಲ್ಲಿಯ ಮಹಿಳಾ ಹೆಜ್ಜೆಗಳನ್ನು ಐದು ನೆಲೆಗಳಲ್ಲಿ ನೋಡುವ ಕೆಲಸ ಮಾಡಿದ್ದಾರೆ. ಅವುಗಳೆಂದರೆ 1. ಸಾಂಪ್ರದಾಯಿಕ ನೆಲೆ : ಈ ನೆಲೆಯಲ್ಲಿ ಲೇಖಕಿ ಯರು ಬರೆದ ಕಥೆಗಳಲ್ಲಿ ಅವರು ವಾಸ್ತವದ ಪ್ರತಿನಿಧಿಗಳಂತೆ ಸಮಾಜದಲ್ಲಿ ತಾವು ಕಂಡ ಅನುಭವಿಸಿದ ಚಿತ್ರಣಗಳನ್ನು ನೀಡಿದ್ದು, ತಮ್ಮ ಮೇಲಿನ ದೌರ್ಜನ್ಯವನ್ನು ಒಪ್ಪಿಕೊಳ್ಳುತ್ತಾ, ಮನಮಿಡಿಯುತ್ತಾ ವ್ಯವಸ್ಥೆಯಲ್ಲಿನ ಪುರುಷ ಶೋಷಣೆಯನ್ನು ದಾಖಲು ಮಾಡುವ ಪ್ರಯತ್ನ ಮಾಡಿದ್ದನ್ನು ತಿಳಿಸುತ್ತವೆ. 2. ಸ್ತ್ರೀ ಕೇಂದ್ರಿತ ದೃಷ್ಟಿಕೋನದ ನೆಲೆ : ಈ ನೆಲೆಯಲ್ಲಿ ಬಂದ ಕಥೆಗಳು ವಿಧವಾ ಸಮಸ್ಯೆ, ವೇಶ್ಯಾಸಮಸ್ಯೆ, ವರದಕ್ಷಿಣೆ, ಕೌಟುಂಬಿಕ ವಿರಸ, ಬಹುಪತ್ನಿತ್ವ, ಬಂಜೆತನ, ವಿವಾಹೇತರ ಲೈಂಗಿಕ ಸಂಬಂಧ, ಕುಡಿತದ, ಜೂಜಿನ ಚಟದ ಗಂಡಂದಿರ ದಬ್ಬಾಳಿಕೆ, ಸ್ತ್ರೀ ಜೀತಾದಾಳು, ಭೀಕ್ಷುಕಿಯರ, ದಲಿತರ, ರೈತರ, ಕಾರ್ಮಿಕರ ಸಮಸ್ಯೆಗಳು, ಬದುಕಿನ ನಿರರ್ಥಕತೆ, ಏಕಾಂಗಿತನ, ಅನಾಥಪ್ರಜ್ಞೆ, ಬದುಕಿನ ದ್ವಂದ್ವಗಳು, ಮನೋವಲಯದ ತೊಳಲಾಟ, ವ್ಯಕ್ತಿಯ ದೌರ್ಬಲ್ಯ, ತೀವ್ರ ವೈಯಕ್ತಿಕ ತುಡಿತಗಳು, ಪಾಪಪ್ರಜ್ಞೆ, ಸಿದ್ಧ ಪಾತ್ರಗಳ ತಿರಸ್ಕಾರ, ವ್ಯಕ್ತಿಯ ಅಂತಃಶಕ್ತಿ

ಮುಂತಾದ ಯಾತನೆಗಳನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸುತ್ತವೆ. ಆ ಮೂಲಕ ಕೌಟುಂಬಿಕ ಚೌಕಟ್ಟಿನೊಳಗಡೆ ಸ್ತ್ರೀ ನಿಲುವುಗಳ ಕೇಂದ್ರಿಕರಣದ ಪ್ರಜ್ಞೆಯನ್ನು ಇಲ್ಲಿಯ ಕಥೆಗಳು ಅಭಿವ್ಯಕ್ತಿಪಡಿಸುತ್ತವೆ. 3. ಸ್ತ್ರೀ ಸಂವೇದನೆಯ ನೆಲೆ : ಈ ನೆಲೆಯಲ್ಲಿ ಬಂದ ಕಥೆಗಳು ಹೆಣ್ಣಿನ ಬದುಕಿನ ಸೂಕ್ಷ್ಮಭಾವನೆ, ತಲ್ಲಣ, ಅನಿಶ್ಚಿತತೆ, ಸಮಾಜದ ಇಬ್ಬಗೆಯ ನೀತಿಯನ್ನು ಪ್ರತಿಬಿಂಬಿಸಿದ್ದು, ಹೆಣ್ಣಿನ ಮನೋರಂಗದ ಅಭಿಲಾಷೆಗಳ ಹುಡುಕಾಟಗಳು ಕೇಂದ್ರವಾಗಿವೆ. ಜೊತೆಗೆ ವಿವಿಧ ಸ್ಥರದ ಹೆಣ್ಣಿನ ಬದುಕನ್ನು, ಗೋಜಲುಗಳನ್ನು, ಸ್ತ್ರೀಲೋಕದ ವಿವಿಧ ಮುಖ, ವಿವಿಧ ವ್ಯಕ್ತಿತ್ವ, ವಿವಿಧ ಆಕೃತಿ, ಭಾವಸ್ಥಿತಿಗಳನ್ನು ಈ ನೆಲೆಯ ಕಥೆಗಳು ಪರಿಚಯಿಸುತ್ತವೆ. 4. ವಿವಿಧ ಸ್ತರಗಳ ನೆಲೆ : ಈ ನೆಲೆಯಲ್ಲಿ ಬಂದ ಕಥೆಗಳು ವಿಭಿನ್ನ ಜಾತಿ, ವರ್ಗ ಪ್ರದೇಶದ ಹಿನ್ನಲೆಯಿಂದ ಬಂದ ಲೇಖಕಿಯರು ತಮ್ಮ ಪರಿಸರದ ಬದುಕನ್ನು ಬಿಚ್ಚಿಡುವ, ಪ್ರಾದೇಶಿಕ ಸತ್ವವನ್ನು ಹೀರಿಕೊಳ್ಳುವ ಪ್ರಯತ್ನ ನಡೆಸಿದ್ದುನ್ನು ಮತ್ತು ಮಹಿಳಾ ಸಾಹಿತ್ಯಕ್ಕೆ ಹೊಸ ಆಯಾಮ ನೀಡುತ್ತಿದ್ದನ್ನು ತಿಳಿಸುತ್ತವೆ. ಮುಂದುವರೆದು ಇವು ವೈವಾಹಿಕ ಸಾಮರಸ್ಯ ಇಲ್ಲದ, ಸ್ತ್ರೀ ಮತ್ತು ಪುರುಷ ಪ್ರಪಂಚದಲ್ಲಿ ಸಹಜ ಎನ್ನಿಸುವ ಅನೈತಿಕ ಸಂಬಂಧಗಳು, ಸ್ತ್ರೀ ಬದುಕಿಗೆ ಅಸಹಜ ಎನ್ನಿಸುವ ತಾರತಮ್ಯ ನೀತಿ, ಪುರುಷನನ್ನು ಮಾನ್ಯ ಮಾಡುವ ಸಮಾಜ ಸ್ತ್ರೀಯನ್ನು ತುಚ್ಛೀಕರಿ ಸುವ ಅಸಮಾನ ನೆಲೆಯ ಧೋರಣೆಗಳನ್ನು ಚರ್ಚಿಸುತ್ತವೆ. 5. ಸ್ವಾಯತ್ತತೆಯ ಹುಡುಕಾಟದ ನೆಲೆ : ಈ ನೆಲೆಯಲ್ಲಿ ಬಂದ ಕಥೆಗಳು ತನ್ನ ಸ್ವಾಯತ್ತ ನೆಲೆಯ ಶೋಧದತ್ತ ಹುಡುಕಾಟದಲ್ಲಿರುವ ಸ್ತ್ರೀಯರು, ರಚನಾತ್ಮಕವಾಗಿ ತನ್ನನ್ನು ತಾನು ಕಟ್ಟುವ ಪ್ರಯತ್ನದಲ್ಲಿರುವ ಸ್ತ್ರೀಯರು, ಹೋರಾಟದ ಸ್ಥಿತಿಯಲ್ಲೂ ತನ್ನನ್ನು ಹೇಗೆ ರೂಪಿಸಲಿ ಎಂಬ ಅಸ್ಮಿತೆಯ ಹುಡುಕಾದಲ್ಲಿರುವ ಸ್ತ್ರೀಯರು, ವ್ಯಂಗ್ಯ, ವಿಷಾದ, ಪ್ರತಿಭಟನೆ, ತೀವ್ರವಾದ ಆಕ್ಷೇಪ, ಸಮಾನತೆಯ ಹೋರಾಟವನ್ನು ಮೀರಿದ ಹೊಸ ನಿಲುವಿನ ವಿನ್ಯಾಸದ ಪಾತ್ರಗಳು ಹಾಗೂ ತಮ್ಮ ಸೃಜನಶೀಲತೆಗೆ ತಡೆ ಮಾಡುವ ಅಂಶಗಳನ್ನು ಗುರುತಿಸಿ ಅದನ್ನು ಧೈರ್ಯದಿಂದ ಪ್ರಶ್ನಿಸಿ ಮತ್ತು ಪ್ರತಿಭಟಿಸಿ ತನ್ನ ಸೃಜನಶೀಲತೆಯಲ್ಲಿ ತನ್ನತನ ಬೆಳೆಸಿಕೊಳ್ಳುವತ್ತ ಸಾಗುತ್ತಿದೆ.

ಒಟ್ಟಾರೆಯಾಗಿ ನೋಡಿದಾಗ ಸಂಪೂರ್ಣ ಕೃತಿಯಲ್ಲಿ ಚೇತನಾ ಅವರು ಸ್ತ್ರೀ ಸಂವೇದನೆಯನ್ನು ಕನ್ನಡದ ಮಹಿಳಾ ಕಥಾ ಸಾಹಿತ್ಯದಲ್ಲಿ ಕಟ್ಟಿಕೊಡುವ ಕೆಲಸ ಮಾಡಿದ್ದಾರೆ. ಆ ಮೂಲಕ ಚೇತನಾ ಅವರು ಕೃತಿಯಲ್ಲಿ ಹೆಣ್ಣು ನಡೆದು ಬಂದ ಚಾರಿತ್ರಿಕ ಹೆಜ್ಜೆ ಗುರುತುಗಳನ್ನು ಅರಿಯುವ ಕೆಲಸವನ್ನು ಮಾಡಿದ್ದಾರೆ. ಮೌಖಿ ಕ ಸಾಹಿತ್ಯದಿಂದ ಹಿಡಿದು ಕನ್ನಡ ಸಾಹಿತ್ಯದ ಎಲ್ಲಾ ಹಂತಗಳಲ್ಲೂ ಮುಖ್ಯವಾಗಿ ಎರಡು ನೆಲೆ ಅಥವಾ ದೃಷ್ಟಿಕೋನದಲ್ಲಿ ಕಥೆಗಳನ್ನು ನೋಡುವ ಕೆಲಸವನ್ನು

ಲೇಖಕಿಯು ಮಾಡಿದ್ದು ಅವುಗಳೆಂದರೆ,

1. 'ಸ್ತ್ರೀ ಚಿತ್ರಿತ ನೆಲೆ' ಅದು 'ಸ್ತ್ರೀ ಶೋಷಣೆಯ ನೆಲೆ' ಹಾಗೂ ಪುರುಷ ನಿರ್ಮಿತ ತ್ಯಾಗದ ಸ್ತ್ರೀಯರ ಚಿತ್ರಣಗಳಿಂದ ಕೂಡಿರುವ ನೆಲೆ.
2. 'ಸ್ತ್ರೀ ಸೃಷ್ಟಿತ ನೆಲೆ' ಅದು 'ಪ್ರಗತಿಪರ' ಅಥವಾ 'ಪ್ರತಿಭಟನಾ' ಅಥವಾ 'ಅನನ್ಯತೆಯ ನೆಲೆ' ಹೋರಾಟದ ಮೂಲಕ ತನ್ನ ಹಕ್ಕು ಸ್ಥಾಪಿಸುವ ಹಾಗೂ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವ ನೆಲೆ.

ಕೃತಿಯಲ್ಲಿ ಲೇಖಕಿಯವರು ಗುರುತಿಸುವಂತೆ ಹಳಗನ್ನಡ ಸಾಹಿತ್ಯದಲ್ಲಿ ಪತ್ನಿ, ಪ್ರೇಯಸಿ, ತಾಯಿ, ಮಗಳು, ಸೋದರಿ, ವೇಶ್ಯೆ ಮುಂತಾದ ಪುರುಷ ಕೇಂದ್ರಿತ ನೆಲೆಯ ಗುರುತಿನ ಮೂಲಕ ನಿಧಾನವಾಗಿ ಕರಗಿ ಹೋಗುವ ಪಾತ್ರಗಳಿದೆಯೆ ವಿನಃ ತನ್ನ ಅಸ್ಮಿತೆಯನ್ನು ಪ್ರಖರವಾಗಿ ಅಭಿವ್ಯಕ್ತಿಸಿದ, ಅಸ್ತಿತ್ವ ಛಾಪಿಸಿದ ಪಾತ್ರಗಳು ದಾಖಲಾಗಿಲ್ಲ. ಹೀಗೆ ಈ ಕಾಲದಲ್ಲಿ ಧರ್ಮ ಮತ್ತು ಪ್ರಭುತ್ವಗಳ ಅಡಿಯಲ್ಲಿ ಸ್ತ್ರೀ ಧ್ವನಿ ಹುದುಗಿ ಹೋಗಿದೆ. ವಚನಯುಗದಲ್ಲಿ ದಾಸ್ಯತ್ವದಿಂದ ಬಿಡುಗಡೆಯನ್ನೂ, ಅಸ್ಮಿತೆಯ ಉಳಿವಿಗಾಗಿ ಪ್ರಯತ್ನವನ್ನೂ ಸ್ವಯಂ ಹೆಣ್ಣೆ ನಡೆಸಬೇಕು. ಮೊದಲು ಹೆಣ್ಣು ಬದಲಾಗಿ ಅನಂತರ ವ್ಯವಸ್ಥೆಯನ್ನು ಬದಲಿಸಲು ಪ್ರಯತ್ನಿಸಬೇಕು ಎಂಬುದನ್ನು ವಚನಕಾರ್ತಿಯರ ವಚನಗಳ ಮೂಲಕ ಶೋಧಿಸಿ ಇಂದಿನ 'ಸ್ತ್ರೀವಾದ' ಚಳವಳಿಗೆ ಒಂದು ಹೊಸದಾದ ಮಾರ್ಗವನ್ನು ಚೇತನಾ ಅವರು ತೋರಿಸಿ ಕೊಟ್ಟಿದ್ದಾರೆ.

ವಚನೋತ್ತರ ಕಾಲದ ಸಾಹಿತ್ಯದಲ್ಲಿ ವ್ಯವಸ್ಥೆಯ ಒಪ್ಪಿತ, ಸಂಪ್ರದಾಯ ಪ್ರಧಾನ ಪಾತ್ರಗಳೆ ಹೆಚ್ಚಾಗಿ ಕಂಡುಬರುವುದನ್ನು ತಮ್ಮ ಕೃತಿಗಳಲ್ಲಿ ತಿಳಿಸುವ ಲೇಖಕಿಯೂ ಇದರ ನಡುವೆಯೂ ಅಲ್ಲಲ್ಲಿ ಸ್ತ್ರೀ ಅಸ್ಮಿತೆಯ ಆಶಯಗಳು ಪ್ರಕಟವಾಗಿರುವುದನ್ನು ಗುರುತಿಸುತ್ತಾರೆ. ಮಹಿಳಾದಾಸ ಸಾಹಿತ್ಯದಲ್ಲಿ ಸಂಪ್ರದಾಯವನ್ನು ಅನುಕರಿಸುವ ಸ್ಥಾಪಿತ ಮಾದರಿತ್ವಕ್ಕೆ ಒಪ್ಪಿಕೊಂಡ ಸ್ತ್ರೀಯರನ್ನು ಕಾಣಬಹುದಾದರೂ ಇವರೆಲ್ಲಾ ಕೀರ್ತನ ಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿರುವುದನ್ನು ಕೃತಿಯಲ್ಲಿ ಲೇಖಕಿಯೂ ಗುರುತಿಸಿದ್ದಾರೆ. ಮಹಿಳಾದಾಸ ಸಾಹಿತ್ಯದಲ್ಲಿ ಹೆಚ್ಚಾಗಿ ಪೂಜೆಯ ಹಾಡು, ಹಸೆಹಾಡು, ಆರತಿ ಹಾಡು, ವಧುವಿನ ಬೀಳ್ಕೊಡುಗೆ ಹಾಡು, ದೇವರ ನಾಮಗಳು ಇದ್ದರೂ ಅವು ಸಹ ಮನುಷ್ಯನ ಬದುಕಿನ ಸೂಕ್ಷ್ಮಸಂಗತಿಗಳನ್ನು ಹಿಡಿದಿಟ್ಟಿವೆ.

ಹೊಸಗನ್ನಡದ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ–ಸ್ತ್ರೀವಾದ, ಮುಸ್ಲಿಂ ಸಂವೇದನೆ ಮತ್ತು ಸಮಕಾಲೀನ ಕಾಲಘಟ್ಟಗಳಲ್ಲಿ ಮಹಿಳಾ ಕಥಾ ಜಗತ್ತಿನಲ್ಲಿ ವ್ಯಕ್ತವಾಗಿರುವ ಸ್ತ್ರೀ ಸಂವೇದನೆಯನ್ನು ಕೃತಿಯಲ್ಲಿ ಹುಡುಕುತ್ತ ಸಾಗುವ

ಲೇಖಕಿಯು ಸಮಕಾಲೀನ ಲೇಖಕಿಯರ ಕಥೆಗಳು ಸ್ತ್ರೀಯ ದೇಹದ ಹಂಬಲ, ಅವಳೊಳಗಿನ ಆಕರ್ಷಣೆ, ಚಂಚಲತೆ, ಕ್ರೌರ್ಯ, ಸ್ವಾರ್ಥ ಎಲ್ಲವನ್ನು ಯಾವ ಗೊಂದಲವಿಲ್ಲದೆ, ಆದರ್ಶದ ಹೊದಿಕೆಯಿಂದ ಅವಳನ್ನು ಎಳೆದು ಬೆತ್ತಲಾಗಿ ನಮ್ಮ ಮುಂದೆ ನಿಲ್ಲಿಸುವುದನ್ನು ಹಾಗೂ ಸ್ತ್ರೀ ಮತ್ತು ಪುರುಷ ಒಬ್ಬರನ್ನೊಬ್ಬರು ಹೇಗೆ ಶೋಷಿಸಬಲ್ಲರು ಎಂಬುದನ್ನು ಅನಾವರಣಗೊಳಿಸುತ್ತಾರೆ. ಮುಂದುವರೆದು ಸ್ತ್ರೀ ಆಂತರಿಕವಾಗಿ ಸಬಲಳು. ಅವಳ ಆಂತರಿಕ ಶಕ್ತಿಯ ಚೈತನ್ಯದಿಂದ ಸ್ತ್ರೀ ಅಸ್ಮಿತೆಯನ್ನು ಕಟ್ಟಲು ಸಾಧ್ಯವಿದೆ. ಶಿಕ್ಷಣ ಅವಳ ವಿಕಸನಕ್ಕೆ ಸಹಕಾರಿ ಆದರೆ ಅವಳಲ್ಲಿನ ಅರಿವಿನ ಪ್ರಜ್ಞೆ, ಅವಳ ಬೆನ್ನೆಲುಬು. ಶಿಕ್ಷಣ ಹೆಣ್ಣಿನ ಅಸ್ಮಿತೆಯ ಅಡಿಗಲ್ಲು ಎಂಬಂತ ನಿಲುವು ಆಧುನಿಕ ಮನಸ್ಕರಲ್ಲಿದೆ. ಆದರೆ ಅವಳ (ಮಹಿಳೆಯ) ಅಂತರ್ಯದ ಒಳಝರಿ ನಿರಂತರವಾಗಿ ಪ್ರಹಿಸುತ್ತಿದ್ದು ಅಗತ್ಯಕ್ಕೆ ತಕ್ಕಂತೆ ಸ್ಪೋಟಗೊಳ್ಳುತ್ತವೆ ಎಂಬುದನ್ನು ಸಮಕಾಲೀನ ಲೇಖಕಿಯರ ಕಥೆಗಳ ಮೂಲಕ ಚೇತನಾ ಅವರು ಗುರುತಿಸುತ್ತ ಚಳವಳಿಯಾಗಿ ಆರಂಭವಾದ ಸ್ತ್ರೀವಾದ ಇಂದು ಕೇವಲ ಚಳವಳಿಯಾಗಿ ಮಾತ್ರ ಉಳಿಯದೆ ಅದು ಬಹಳ ಮುಂದೆ ಹೋಗಿರುವುದನ್ನು ಕೃತಿಯಲ್ಲಿ ಕಟ್ಟಿಕೊಡುತ್ತಾರೆ.

ಚೇತನಾ ಅವರು ಕೃತಿಯಲ್ಲಿ ಸ್ತ್ರೀ ಅಂತಃಸತ್ವವನ್ನು ಸೆಲೆಯನ್ನು ಕನ್ನಡ ಸಾಹಿತ್ಯ ಕಾಲಘಟ್ಟದಲ್ಲಿ ಹುಡುಕುವ ಕೆಲಸ ಮಾಡುತ್ತ 'ಸ್ತ್ರೀವಾದ'ವೆಂಬುದು ನಿಂತ ನೀರಲ್ಲ, ಅದಕ್ಕೂ ಚಲನೆಯಿದೆ ಮತ್ತು ಮುಂದುವರಿಯುತ್ತ ಹೊಸ ಹೊಸ ಆಲೋಚನೆಗಳಿಗೆ ತನ್ನನ್ನು ತೆರೆದುಕೊಂಡು ಸಾಗುತ್ತಿದೆ. ತನ್ನೊಳಗಿನ ಅಂತಃಸತ್ವ ಗಟ್ಟಿಗೊಳ್ಳದೆ ಅವಳಿಗೆ (ಸ್ತ್ರೀಯರಿಗೆ) ಬಿಡುಗಡೆಯಿಲ್ಲ. ಈ ಅಂತಃಸತ್ವ ಹೊರಗಿನಿಂದ ತರುವುದಲ್ಲ ಬದಲಾಗಿ ತನ್ನೊಳಗಿನ ಅರಿವಿನಿಂದ ಕಂಡುಕೊಳ್ಳಬೇಕೆಂಬುದನ್ನು ಹೇಳುತ್ತ, ಹೆಣ್ಣಿನ ಬಿಡುಗಡೆಯ ದಾರಿಯನ್ನು ಗುರುತಿಸುವ ಕೆಲಸ ಮಾಡಿದ್ದಾರೆ.

ಹೀಗೆ ತಮ್ಮ ಅಪರಿಮಿತವಾದ ಓದು ಮತ್ತು ಪರಿಶ್ರಮದೊಂದಿಗೆ ವಿಭಿನ್ನ ಹಾಗೂ ಆರೋಗ್ಯ ಪೂರ್ಣನೋಟಗಳನ್ನು ಒಳಗೊಂಡಿರುವ ಕೃತಿಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡುವ ಮೂಲಕ ಬರವಣಿಗೆಯ ಲೋಕಕ್ಕೆ ಹೊಸ ಲೇಖಕಿ ಯಾಗಿ ಪಾದಾರ್ಪಣೆ ಮಾಡಿದ್ದಾರೆ.

**ಆಕರ ಗ್ರಂಥ:**

1. ಚೇತನಾ ಹೆಗಡೆ. (ಡಿಸೆಂಬರ್ 2023). ಅವಳ ಪಥ. ಅವ್ಯಕ್ತ ಪ್ರಕಾಶನ. ಬೆಂಗಳೂರು.